# ಗ್ರಾಮ ಸ್ವರಾಜ್ ಸ್ಥಾಪನೆ: ಆರಂಭದಲ್ಲೇ ಎಡವಿದ ಸರಕಾರ

## ವೈಫಲ್ಯ



**ಸುರೇಶ ಎಸ್. ಗೌಡ**

ಗ್ರಾಪಂ ಹಕ್ಕೊತ್ತಾಯ ಆಂದೋಲನ ಹಾಗೂ ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆ ಕಾರ್ಯಕರ್ತ

edit@vishwavani.news

'ಕಾಯ್ದೆ ಬದಲಾಗಿದೆ, ಹೊಸ ಕಾಯ್ದೆ ಆಗಿದೆ ಅಂತ ನಾವು ಕೇಳಿದ್ದೀವಿ. ಆದರೆ ಏನೇನು ಬದಲಾವಣೆ ಆಗಿದೆ ಎಂದು ಯಾರೂ ಹೇಳಿಲ್ಲ. ಪಂಚಾಯತ್‌ಗೆ ಏನು ಅಧಿಕಾರವಿದೆ, ಜನರಿಗೆ ಏನು ಮಾಡಬಹುದು ಅನ್ನೋದು ನಮಗೆ ತಿಳಿದಿಲ್ಲ. ಕಾನೂನಿನ ಬಗ್ಗೆ ಏನೂ ಗೊತ್ತಿಲ್ಲದೆ ಹೇಗೆ ಮಾಡುವುದು. ಅವುಗಳನ್ನೆಲ್ಲಾ ತಿಳಿದುಕೊಳ್ಳಬೇಕು ಎನ್ನುವ ಆಸೆ ನಮಗೂ ಇದೆ. ನಾವು ಒಂದಿಷ್ಟು ತಿಳಿದುಕೊಂಡರೆ ಮಾತ್ರ ಜನರಿಗೆ ನಮ್ಮ ಕೈಲಾದಷ್ಟು ಮಾಡೋಕೆ ಸಾಧ್ಯ'.

'ತರಬೇತಿ ಎಂದು ತಾಲೂಕು ಪಂಚಾಯಿತಿಗೆ ಕರೆಯುತ್ತಾರೆ. ಒಂದಿಡೀ ದಿನ ತೆಗೆದುಕೊಳ್ಳುತ್ತಾರೆ. ತರಬೇತಿಗೆ ಅಂತ ಹೋದ್ರೆ ಅಲ್ಲಿ ಒಂದು ಸಿಡಿ ಹಾಕ್ತಾರೆ. ಯಾರಿಗೆ ಗೊತ್ತಾಗತ್ತೆ ಅದು. ಒಂಥರಾ ಸಿನಿಮಾ ನೋಡಿದಂತೆ ದಿನಗಳೆದ ಹಾಗೆ ಎಲ್ಲ ಮರೆತು ಹೋಗುತ್ತದೆ. ಏನಾದರೂ ಅನುಮಾನ ಬಂದರೆ, ಹೆಚ್ಚಿನ ಮಾಹಿತಿ, ಚರ್ಚಿಸಬೇಕೆಂದು ಬಯಸಿದರೆ ಸೂಕ್ತ ಮಾಹಿತಿ ನೀಡಬಲ್ಲ ಮಾಹಿತಿದಾರರು ಅಲ್ಲಿರುವುದಿಲ್ಲ. ತರಬೇತಿ ಸರಿಯಾಗಿಯೂ, ಸಂಪೂರ್ಣವಾಗಿಯೂ ಆಗುವುದಿಲ್ಲ'.

'ಕಾಯ್ದೆಯ ಬಗ್ಗೆ, ಯೋಜನೆಗಳ ಬಗ್ಗೆ ಪಿಡಿಓಗೆ ಮಾಹಿತಿ ಇದೆ ಅಂತಾ ತಿಳ್ಕೊಂಡ್ರೆ ಅವ್ರು ಯಾವುದೇ ಮಾಹಿತಿ ಕೊಡಲ್ಲ. ಸರಕಾರದಿಂದ ಹಲವಾರು ಒಳ್ಳೆಯ ಯೋಜನೆಗಳಿವೆ. ಆದರೆ ಅದನ್ನು ಜನರಿಗೆ ಹೇಗೆ ಮುಟ್ಟಿಸೋದು ಅನ್ನೋದು ನಮಗೆ ಗೊತ್ತಿಲ್ಲ. ನಮಗೆ ನೇರವಾಗಿ, ಸೂಕ್ತ, ಸಂಪೂರ್ಣ ಮಾಹಿತಿ ಸಿಗುವ ಹಾಗಾಗಬೇಕು. ಕಾಯ್ದೆ ಬಗ್ಗೆ ಇರುವ ಮಾಹಿತಿಯೂ ಅಷ್ಟ ಕಷ್ಟ. ಅದನ್ನು ಯಾರೂ ನೀಡುವುದಿಲ್ಲ'.

'ನಮ್ಮ ಕಡೆ ಗ್ರಾಮ ಸಭೆನೇ ಸರಿಯಾಗಿ ನಡೆಯಲ್ಲ. ಇನ್ನು ಕಾಯ್ದೆ ಪ್ರಕಾರ ಪ್ರದೇಶವಾರು ಸಭೆಗಳನ್ನು ಮಾಡುವ ಬಗ್ಗೆ ವಿಷಯಗಳೇ ತಿಳಿದಿಲ್ಲ. ಮಾಹಿತಿ ಇಲ್ಲದೇ ಇರುವಾಗ ನಾವು ಈ ವಿಷಯದಲ್ಲಿ ಹೇಗೆ ಜನರೊಡನೆ ಮಾತನಾಡುವುದು?'

'ನಮ್ಮ ಗ್ರಾಮ ನಮ್ಮ ಯೋಜನೆ ಬಗ್ಗೆ ಕೇಳಿದ್ದೇವೆ. ಕಾಮಗಾರಿಗಳ ಪಟ್ಟಿ ಮಾಡಿ ಕೊಟ್ಟಿದ್ದೇವೆ. ಇದರ ಹೊರತಾಗಿ ಇನ್ನೇನು ಮಾಡಬೇಕಿತ್ತೆನ್ನುವ ಯಾವುದೇ ಮಾಹಿತಿ ಇಲ್ಲ. ನಮಗೆ ಇದರ ಬಗ್ಗೆ ಯಾರೂ ವಿಷಯ ತಿಳಿಸಿಲ್ಲ'.

ಹೀಗೆ ಒಂದಾ? ಎರಡಾ? 13 ಜಿಲ್ಲೆಗಳ ಸುಮಾರು 20 ತಾಲೂಕಿನ ವಿವಿಧ ಗ್ರಾಪಂನ ಜನಪ್ರತಿನಿಧಿಗಳನ್ನು ಮಾತನಾಡಿಸಿದಾಗ, ಕಾಯ್ದೆ ಕುರಿತಾಗಿ ತಮಗಿರುವ ಮಾಹಿತಿ, ಪಡೆದುಕೊಂಡ ತರಬೇತಿಗಳು ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯ ಕುರಿತು ಅಳಲು ತೋಡಿಕೊಂಡ ಪರಿಯಿದು. ರಾಜ್ಯದ ಎಲ್ಲ ಜಿಲ್ಲೆಗಳ, ಬಹುತೇಕ ಎಲ್ಲ ಪಂಚಾಯತ್‌ಗಳ ಕಥೆಯೂ ಇದೇ. ಇವೆಲ್ಲಾ ಗ್ರಾಪಂ ಪ್ರತಿನಿಧಿಗಳ ಪ್ರತಿಕ್ರಿಯೆಯಾದರೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವಿಚಾರವೂ ಇದಕ್ಕೆ ಹೊರತಾಗಿಲ್ಲ. ಅವರಿಗೆ ತಿದ್ದುಪಡಿ ಕಾಯ್ದೆ ಜಾರಿಗೆ ಬಂದಿರುವ ಹಾಗೂ ಅದರ ಹೆಸರು 'ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ' ಅನ್ನೋದಷ್ಟೇ ಗೊತ್ತು ಹೊರತು, ಬದಲಾದ ಅಂಶಗಳ ಬಗ್ಗೆ ಯಾವುದೇ ಸ್ಪಷ್ಟ ಮಾಹಿತಿಯಿಲ್ಲ.

ಗ್ರಾಪಂಗಳಲ್ಲಿ ಕಾಯ್ದೆಗಳ ಬಗ್ಗೆ ಮಾತನಾಡಿದರೆ ಅವರು ಸುತ್ತೋಲೆಗಳ ಬಗ್ಗೆ ಮಾತನಾಡುತ್ತಾರೆ. ಇನ್ನೂ ಹಳೆಯ ಕಾಯ್ದೆಯನ್ನೇ ಇಟ್ಟುಕೊಂಡು ಆಡಳಿತ ನಡೆಸುತ್ತಿದ್ದಾರೆ. ಹೊಸ ಕಾಯ್ದೆ ಪುಸ್ತಕ ಸಹ ಹಲವಾರು ಪಂಚಾಯತ್‌ಗಳಲ್ಲಿ ಇಲ್ಲ! ತಮಗೆ ಗ್ರಾಮ ಸ್ವರಾಜ್ ಕಾಯ್ದೆಯ ಬಗ್ಗೆ ಮಾಹಿತಿ ಗೊತ್ತಿಲ್ಲ ಎಂದು ವಿನಯಪೂರ್ವಕವಾಗಿಯೇ ಒಪ್ಪಿಕೊಳ್ಳುತ್ತಾರೆ ಮತ್ತು ಮಾಹಿತಿ ತಿಳಿಸುವಂತೆಯೂ ಕೇಳುತ್ತಾರೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೇ ಹೇಳುವಂತೆ, 'ನಮ್ಮ ಗ್ರಾಮ ನಮ್ಮ ಯೋಜನೆಯನ್ನು ಪಂಚಾಯತ್ ವ್ಯಾಪ್ತಿಯಲ್ಲಿ ಮಾಡಿ ಎಂದು ನಮಗೆ ತರಬೇತಿ ನೀಡಿದ್ದಾರೆ. ಆದರೆ ಇದರಿಂದ ನಮಗೆ ಗೊಂದಲಗಳೇ ಉಂಟಾಗಿವೆ ಹೊರತು ಸ್ಪಷ್ಟ ಮಾಹಿತಿಗಳು ಸಿಗಲಿಲ್ಲ. ನಾವು ಪುಸ್ತಕ ಓದಿ, ಹತ್ತಿರದ ಗ್ರಾಪಂನವರಿಂದ ಮಾಹಿತಿ ಪಡೆದು ಯೋಜನೆ ಮಾಡಿದ್ದೇವೆ. ಅಸಮರ್ಪಕ ತರಬೇತಿ, ಮಾಹಿತಿ ಕೊರತೆಯಿಂದಾಗಿ, ಅರ್ಧಕ್ಕೇ ಕೈಬಿಡುವ ಪದ್ಧತಿಗಳಿಂದಾಗಿ ಎಷ್ಟೋ ಯೋಜನೆಗಳು ಅರ್ಥ ಕಳೆದುಕೊಳ್ಳುತ್ತವೆ' ಎನ್ನುತ್ತಾರೆ.

ಇವನ್ನೆಲ್ಲ ಗಮನಿಸಿದಾಗ ಗ್ರಾಮ ಸ್ವರಾಜ್ ಕಾಯ್ದೆ ಜಾರಿಗೆ ಬಂದು 10 ತಿಂಗಳುಗಳೇ ಕಳೆದಿದ್ದರೂ ಕಾಯ್ದೆ ಬಗೆಗಿನ ಮಾಹಿತಿ ಕೊರತೆಯ ಅಗಾಧತೆ ಎಷ್ಟು ಎಂಬುದು ಸುಲಭವಾಗಿ ಅರ್ಥವಾಗುತ್ತದೆ. 2015ರ ನವೆಂಬರ್‌ನಲ್ಲಿ ನಡೆದ ವಿಧಾನಮಂಡಲದ ಅಧಿವೇಶನದಲ್ಲಿ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (2ನೇ ತಿದ್ದುಪಡಿ) ಕಾಯ್ದೆ 2015ಕ್ಕೆ ಉಭಯ ಸದನಗಳಲ್ಲಿ ಅಂಗೀಕಾರವಾದಾಗ ಸಂಭ್ರಮಿಸಿದ್ದು ನಿಜ. ಆದರೆ ಈ ಕಾಯ್ದೆಯನ್ನು ಆಚರಣೆಗೆ ತರಲು ಮಾಡಲೇಬೇಕಾದ ಯಾವುದೇ ಪ್ರಮುಖ ಕಾರ್ಯಗಳನ್ನೂ ಸರಕಾರ ಮಾಡೇ ಇಲ್ಲ. ಕಾಯ್ದೆಯ ಕೆಲವು ಅಂಶಗಳನ್ನು ಅಲ್ಲಲ್ಲಿ ಹೆಕ್ಕಿ ತೆಗೆದು, ಅನುಷ್ಠಾನ ಪ್ರಕ್ರಿಯೆ ಪ್ರಾರಂಭಿಸಿತಾದರೂ ಯಾವುದೂ ದಡ ಸೇರುವ ಮಟ್ಟದಲ್ಲಿ ಆಗಲೇ ಇಲ್ಲ. ಉದಾ: ಕಾಯ್ದೆಯ ಅಂಶ 'ಪಂಚಾಯತ್ ಮುಂಚೂಣಿ ಕಾರ್ಯಾಲಯವಾಗಿ' ಕಾರ್ಯನಿರ್ವಹಣೆ ಎಂಬುದನ್ನು ಪಂಚಾಯತ್ 100 ಬಾಪೂಜಿ ಸೇವಾ ಕೇಂದ್ರವೆಂಬ ಹೆಸರಿನಲ್ಲಿ ಜಾರಿಗೆ ತಂದಿತು. ಆದರೆ ಇದೇ ಕಾನೂನಿನ ಪ್ರಮುಖ ಅಂಶವಾದ ಹೊಣೆಗಾರಿಕೆಯೊಂದಿಗೆ ಹೊಣೆಗಾರರು, ಹಣಕಾಸನ್ನೂ ಸಹ ಪಂಚಾಯತ್‌ಗಳಿಗೆ ನೀಡಬೇಕು ಎಂಬ ಅಂಶಕ್ಕೆ ಒತ್ತು ನೀಡಲಿಲ್ಲ. ಹೀಗಾಗಿ ಈ ಕಾರ್ಯಕ್ರಮಕ್ಕೆ ಅಗತ್ಯವಾದ, ಪೂರಕವಾದ ಯಾವುದೇ ಸೌಲಭ್ಯಗಳನ್ನಾಗಲೀ, ಅನುದಾನವನ್ನಾಗಲೀ, ಸಿಬ್ಬಂದಿಯನ್ನಾಗಲೀ ಸರಕಾರ ನೀಡಿಲ್ಲ. ದೂರವಾಣಿ ಸಂಪರ್ಕವೇ ಸರಿಯಾಗಿ ಇರದ ಹಲವಾರು ಗ್ರಾಪಂಗಳಿರುವ ನಮ್ಮ ರಾಜ್ಯದಲ್ಲಿ ಸದಾ ಕಾಡುವ ಸಮಸ್ಯೆ ಅಸಮರ್ಪಕ ಅಂತರ್ಜಾಲದ ವ್ಯವಸ್ಥೆ. ಹೀಗಿರುವಾಗ 100 ಸೇವೆಯಲ್ಲಿ 10 ಸೇವೆ ನೀಡುವುದೂ ಕನಸಿನ ಮಾತು.

ಸರಕಾರ ಕೈಗೊಂಡ ಇನ್ನೊಂದು ಅಂಶವೆಂದರೆ ಗ್ರಾಪಂಗಳ ಮುನ್ನೋಟ ಯೋಜನೆ. ನಮ್ಮ ಗ್ರಾಮ ನಮ್ಮ ಯೋಜನೆ ಶೀರ್ಷಿಕೆಯಲ್ಲಿ ಪ್ರಾರಂಭಗೊಂಡ ಈ ಪ್ರಕ್ರಿಯೆ ಆರಂಭದಿಂದಲೂ ಕಾಯ್ದೆಯನ್ನು ಉಲ್ಲಂಘಿಸುವ ಹಲವಾರು ಅಂಶಗಳನ್ನು ಒಳಗೊಂಡಿದ್ದು, ಆಗಾಗ ಅಲ್ಲಲ್ಲಿ ಕೆಲವನ್ನು ತಿದ್ದಿಕೊಳ್ಳುತ್ತಾ, ಕುಂಟುತ್ತಾ ಸಾಗಿದರೂ ಬರೋಬ್ಬರಿ 9 ತಿಂಗಳುಗಳು ಕಳೆದರೂ ಪಂಚಾಯತ್



ಮಟ್ಟದಲ್ಲಿ ಇದು ಇನ್ನೂ ಅಪೂರ್ಣ! ಅಚ್ಚರಿಯೆಂದರೆ, ರಾಜ್ಯ ಸರಕಾರದ ಕಡತಗಳಲ್ಲಿ, ಸರಕಾರಿ ಅಂತರ್ಜಾಲ ತಾಣಗಳಲ್ಲಿ ಈ ಯೋಜನೆ ಅತ್ಯಂತ ಯಶಸ್ವಿ ಯೋಜನೆ!! ಈ ಇಡೀ ಪ್ರಕ್ರಿಯೆಯ ವೈಫಲ್ಯಕ್ಕೆ ಪ್ರಮುಖ ಕಾರಣ- ವಿವಿಧ ಹಂತಗಳಲ್ಲಿನ ಮಾಹಿತಿಯ ಕೊರತೆಗಳು. ಹೀಗೆ ಕೈಗೊಂಡ ಅಷ್ಟಿಷ್ಟು ಕಾರ್ಯಕ್ರಮಗಳೂ ಅನುಕ್ರಮವಲ್ಲದ, ದೃಢ ಸಂಕಲ್ಪವಿಲ್ಲದ, ಕಾಟಾಚಾರದ ಅಡ್ಡಡ್ಡ ಹೆಜ್ಜೆಯಿಂದಾಗಿ ಗ್ರಾಮ ಸ್ವರಾಜ್ ಕಲ್ಪನೆಯನ್ನು ಮಣ್ಣುಪಾಲು ಮಾಡಿದವು. ಕಾಯ್ದೆ ಅನುಷ್ಠಾನದಲ್ಲಿ ಸರಕಾರ ಎಡವಿದ್ದು ಒಂದೆಡೆಯಾದರೆ, ಪಂಚಾಯತ್ ವ್ಯವಸ್ಥೆಯ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು ಕಾಯ್ದೆ ಬಗ್ಗೆ ಮಾಹಿತಿಯಿಲ್ಲದೆ, ಸೂಕ್ತ ತರಬೇತಿಯಿಲ್ಲದೆ ತಪ್ಪು ಹೆಜ್ಜೆಗಳನ್ನಿಟ್ಟಿದ್ದು ಇನ್ನೊಂದೆಡೆ.

ಉದಾ: ಮಾರಮ್ಮ (ಹೆಸರು ಬದಲಾಯಿಸಲಾಗಿದೆ) ಎಂಬಾಕೆ 2015ರಲ್ಲಿ ಗ್ರಾಪಂ ಚುನಾವಣೆಯಲ್ಲಿ, ಮಹಿಳಾ ಮೀಸಲಿನಲ್ಲಿ ಸದಸ್ಯೆಯಾಗಿ, ನಂತರ ಅಧ್ಯಕ್ಷೆಯೂ ಆಗಿದ್ದರು. ಗ್ರಾಪಂಗೆ ಹೊಸ ಜನಪ್ರತಿನಿಧಿಗಳು ಆಯ್ಕೆಯಾಗಿ 1.5 ವರ್ಷವೂ ಆಗಿರಲಿಲ್ಲ, ಆಗಲೇ ಅವರ ಮೇಲೆ ಉಳಿದ ಸದಸ್ಯರು ಅವಿಶ್ವಾಸ ಗೊತ್ತುವಳಿ ಮಂಡಿಸಿದರು. ಈ ಅವಿಶ್ವಾಸ ಗೊತ್ತುವಳಿಯನ್ನು ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಿಂಧುಗೊಳಿಸುವ ಹಂತಕ್ಕೆ ಬಂದರು. ಆ ಸಮಯದಲ್ಲಿ ಆಕೆ, ಪಂಚಾಯತ್ ರಾಜ್ ವಿಷಯದಲ್ಲಿ ಪರಿಣತರೊಬ್ಬರ ಸಲಹೆ ಕೇಳಿದರು. ಅವರು, ಮಾಹಿತಿ ನೀಡಿದ್ದಷ್ಟೇ ಅಲ್ಲದೆ ಮುಖ್ಯನಿರ್ವಹಣಾಧಿಕಾರಿ ಜತೆ ಮಾತನಾಡಿ ಗ್ರಾಮ ಸ್ವರಾಜ್ ಕಾಯ್ದೆ ಬಗ್ಗೆ ಮಾಹಿತಿ ನೀಡಿ, ಗಂಭೀರ ಆರೋಪ ಹಾಗೂ ಮಾನಸಿಕ ಅನಾರೋಗ್ಯದ ಹೊರತಾಗಿ 30 ತಿಂಗಳವರೆಗೆ ಅಧ್ಯಕ್ಷರ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸುವಂತಿಲ್ಲ ಎಂಬ ಅಂಶವನ್ನು ಮನದಟ್ಟು ಮಾಡಿದ ನಂತರ ಸದಸ್ಯರು ಮಂಡಿಸಿದ ಗೊತ್ತುವಳಿಯನ್ನು ಅಸಿಂಧುಗೊಳಿಸಿದರು!

ಈ ಎಲ್ಲಾ ಅಚಾತುರ್ಯಗಳಿಗೆ ಕಾರಣ ಗ್ರಾಮಮಟ್ಟದಿಂದ ರಾಜ್ಯಮಟ್ಟದವರೆಗಿನ ಚುನಾಯಿತ ಪ್ರತಿನಿಧಿಗಳಲ್ಲಿ, ಅಧಿಕಾರಿಗಳಲ್ಲಿ, ಸಿಬ್ಬಂದಿವರ್ಗಕ್ಕಿರುವ ಮಾಹಿತಿ ಕೊರತೆ, ಅಸಮರ್ಪಕ ತರಬೇತಿ, ಇಚ್ಛಾಶಕ್ತಿಯ ಅನಾಸಕ್ತಿಗಳು. ಕಾಯ್ದೆ ಬಗ್ಗೆ ಮಾಹಿತಿ ಕೊಡಲು ಸರಕಾರವೂ ಜವಾಬ್ದಾರಿಯಿಂದ ವರ್ತಿಸಲಿಲ್ಲ, ಸುತ್ತೋಲೆ ಆದೇಶಗಳನ್ನೇ ನೆಚ್ಚಿಕೊಂಡ ಅಧಿಕಾರಿಗಳು ಮಾಹಿತಿಗಳನ್ನು ಪಡೆಯುವ ಪ್ರಯತ್ನವನ್ನೂ ಮಾಡಲಿಲ್ಲ. ಜನಪ್ರತಿನಿಧಿಗಳು ಆ ಬಗ್ಗೆ ಯೋಚಿಸಲಿಲ್ಲ. ರಾಜ್ಯದ ಕೆಲವು ಪತ್ರಿಕೆಗಳಲ್ಲಿ, ಮಾಸಿಕದಲ್ಲಿ ನೀಡಿದ ಜಾಹೀರಾತಿನ ಹೊರತಾಗಿ ಇನ್ನುಳಿದಂತೆ ಮಾಹಿತಿ ಪ್ರಸರಣ ಕಾರ್ಯಕ್ರಮಗಳು ನಡೆದಂತೆ ಕಾಣುವುದಿಲ್ಲ. ಪಂಚಾಯತ್‌ಗಳಲ್ಲಿ ಆಗಬೇಕಾದ ಮೂಲ ಬದಲಾವಣೆಗಳೂ ಸಹ ಇನ್ನೂ ಆಗಿಲ್ಲ. ಕಾಯ್ದೆಯನುಸಾರ ರಚನೆಯಾಗಬೇಕಾದ ಸಾಮಾನ್ಯ ಸ್ಥಾಯಿ ಸಮಿತಿ, ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಮತ್ತು ಸಾಮಾಜಿಕ ನ್ಯಾಯ ಸಮಿತಿಗಳು ರಚನೆಯಾಗದೇ ಹಳೆಯ ಸ್ಥಾಯಿ ಸಮಿತಿಗಳೇ ಕಾರ್ಯ ನಿರ್ವಹಿಸುತ್ತಿವೆ.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಗ್ರಾಮ ಸ್ವರಾಜ್ ಕಾಯ್ದೆ ಜಾರಿಯಾದ ನಂತರ ಗ್ರಾಪಂಗಳ ಅಭಿವೃದ್ಧಿ ಯೋಜನೆಯನ್ನು ತಯಾರಿಸುವಲ್ಲಿ, ಮಾಹಿತಿ ಕಲೆಹಾಕುವಲ್ಲಿ ರಾಜ್ಯದ ತ್ರಿಸ್ಥರ ಪಂಚಾಯತ್‌ಗಳಿಗೆ ನೀಡಿದ ಅಗತ್ಯ ನಮೂನೆಗಳು, ಅದರ ಕುರಿತಾಗಿರುವ ಕೈಪಿಡಿಯಲ್ಲಿರುವ ಮಾಹಿತಿಗಳು ಹಳೆಯ ಕಾಯ್ದೆಯನ್ನು ಅನುಸರಿಸಿದ್ದವು! ಹೊಸ ತಿದ್ದುಪಡಿ ಕಾಯ್ದೆಯಲ್ಲಿರುವಂತೆ ಜನವಸತಿ ಸಭೆಗಳ ಉಲ್ಲೇಖವಾಗಲೀ, ಸ್ಥಾಯಿಸಮಿತಿಗಳ ವಿವರಗಳಾಗಲೀ, ತಾಲೂಕು ಹಾಗೂ ಜಿಲ್ಲಾ ಯೋಜನಾ ಸಮಿತಿಗಳ ವಿಷಯವಾಗಲೀ ಅದರಲ್ಲಿರಲಿಲ್ಲ! ಪಂಚಾಯತ್ ರಾಜ್ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ತರಬೇತಿ ನೀಡುವ ಸರಕಾರದ ಅಂಗಸಂಸ್ಥೆಗೂ ಕಾನೂನಿನ ಬದಲಾವಣೆಯ ಬಗ್ಗೆ ಮಾಹಿತಿ ಇರಲಿಲ್ಲವೋ ಅಥವಾ ಬೇಕಂತಲೇ ಹೊಸ ತಿದ್ದುಪಡಿ ಕಾನೂನನ್ನು ಕಡೆಗಣಿಸಲಾಗಿದೆಯೋ ಎಂಬುದು ಪ್ರಶ್ನಾರ್ಹ. ಈ ಅಂಶಗಳನ್ನು ಅವಲೋಕಿಸಿದಾಗ ಕಾಯ್ದೆಯ ಕುರಿತಾಗಿ ಮಾಹಿತಿ ಪ್ರಸರಣದ ಕಾರ್ಯದಲ್ಲಿ ಸರಕಾರ ತೋರಿದ ನಿರ್ಲಕ್ಷ್ಯದಿಂದಲೇ ಅನುಷ್ಠಾನ ಕಲಸುಮೇಲೋಗರವಾಗಲು ಕಾರಣವಾಯಿತು. ಇದರೊಂದಿಗೆ ಸರಕಾರದ ವಿವಿಧ ಇಲಾಖೆಗಳೂ ಕಾಯ್ದೆಯನ್ನು ಒಂದಿಲ್ಲೊಂದು ವಿಷಯದಲ್ಲಿ ಉಲ್ಲಂಘಿಸುವಲ್ಲೇ ನಿರತರಾಗಿವೆ ಹೊರತು ಗ್ರಾಮ ಸ್ವರಾಜ್ಯದ ಸ್ಥಾಪನೆಗೆ ಅಗತ್ಯವಾದ ಯಾವುದೇ ಕಾರ್ಯಗಳನ್ನು ಮಾಡುತ್ತಿಲ್ಲ. ಕಾಯ್ದೆಯನ್ನು ಉಲ್ಲಂಘಿಸುವ ಸರಕಾರಿ ಆದೇಶಗಳನ್ನು, ಸುತ್ತೋಲೆಗಳನ್ನು ಹಿಂಪಡೆಯುವ ಬದಲು, ಸರಕಾರಿ ಇಲಾಖೆಗಳು ಅಧಿಕಾರದಾಹಿ, ಅಧಿಕಾರಶಾಹಿಗಳ ಒತ್ತಾಯಕ್ಕೆ ಮಣಿದು ಆಗಾಗ ಸುತ್ತೋಲೆ, ಆದೇಶಗಳನ್ನು ಹೊರಡಿಸಿ ಕಾಯ್ದೆಯನ್ನು ಉಲ್ಲಂಘಿಸುತ್ತಿವೆ.

ಇವೆಲ್ಲ ಗೋಜಲುಗಳ ನಡುವೆಯೂ ಸ್ಥಳೀಯಾಡಳಿತ ಸಂಸ್ಥೆಗಳಿಂದ ಆಯ್ಕೆಯಾದ ವಿಧಾನ ಪರಿಷತ್ ಸದಸ್ಯರು ಒಂದು ಬೆಳ್ಳಿಗೆರೆ ಮೂಡಿಸಿದ್ದಾರೆ. ಚಳಿಗಾಲದ ಅಧಿವೇಶದನಲ್ಲಿ ಸ್ಥಳೀಯಾಡಳಿತದಿಂದ ಆಯ್ಕೆಯಾದ ವಿಧಾನ ಪರಿಷತ್‌ನ 25 ಸದಸ್ಯರು ಈ ಬಾರಿ ಪಂಚಾಯತ್ ರಾಜ್‌ನ ವಾಸ್ತವ ಚಿತ್ರಣವನ್ನು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರ ಹಾಗೂ ಸರಕಾರದ ಗಮನಕ್ಕೆ ತಂದಿದ್ದಾರೆ. ಅಧಿಕಾರಿಗಳು, ಸಿಬ್ಬಂದಿ ಹಾಗೂ ತ್ರಿಸ್ಥರ ಪಂಚಾಯತ್‌ನ ಚುನಾಯಿತ ಪ್ರತಿನಿಧಿಗಳ ಸಾಮರ್ಥ್ಯಾಭಿವೃದ್ಧಿ, ಜವಾಬ್ದಾರಿಯ ನಕ್ಷೆಯನ್ನು ಜಾರಿಗೆ ತರುವ ಬಗ್ಗೆ, ಪಂಚಾಯತ್‌ಗಳಿಗೆ ಹಣಕಾಸು, ಕಾರ್ಯನಿರ್ವಾಹಕರು ಹಾಗೂ ಪ್ರಕಾರ್ಯಗಳ (3 ಎಫ್‌ಗಳು) ಹಸ್ತಾಂತರ, ವಸತಿ ಫಲಾನುಭವಿಗಳ ಆಯ್ಕೆಯ ಗ್ರಾಮ ಸಭೆಯ ಅಧಿಕಾರವನ್ನು ಕಿತ್ತುಕೊಳ್ಳುವಂಥ ಸರಕಾರಿ ಆದೇಶಗಳು ಹಾಗೂ ಸುತ್ತೋಲೆಗಳನ್ನು ಹಿಂಪಡೆಯುವುದು, ಗ್ರಾಮ ಪಂಚಾಯತ್‌ಗಳ ಮೂಲ ಸೌಕರ್ಯಗಳು ಮುಂತಾದ ಪ್ರಮುಖ ವಿಷಯಗಳತ್ತ ಉದಾಹರಣೆ ಸಹಿತ ವಿವರಿಸಿದ್ದಾರೆ. ರಾಜ್ಯಾಡಳಿತದ ಭಾಗವಾದ ಇವರ ಮಾತಿಗಾದರೂ ಸರಕಾರ ಓಗೊಟ್ಟು ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನದಲ್ಲಿ ಕೈಗೊಳ್ಳಬೇಕಾದ ಅಗತ್ಯ ಕ್ರಮಗಳನ್ನು ಶೀಘ್ರವೇ ಕೈಗೊಂಡು ಜನಾಧಿಕಾರಕ್ಕೆ ಮನ್ನಣೆ ನೀಡಲಿ.